**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,**

ನಂಜನಗೂಡು

**ಸಿ.ಸಿ 78/2020** **ಪಿ.** ಡಬ್ಲ್ಯೂ: **7**

**ಸಿ. ಡಬ್ಲು 4**

| | |
|---|---|
| ಸಾಕ್ಷಿದಾರರ ಹೆಸರು ತಂದೆಯ /ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಮಲ್ಲೇಶ<br>ಗುರುಮಲ್ಲಪ್ಪ<br>57 ವರ್ಷ<br>ಡಿ ಗ್ರೂಪ್ ನೌಕರ<br>ನಂಜನಗೂಡು |
| | ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 29-07-2025 |

**ಮುಖ್ಯ ವಿಚಾರಣೆ: ಶ್ರೀ ಎಪಿಪಿ ವಕೀಲರಿಂದ:**

ನನಗೆ ಚಾಸಾ-1 ರಿಂದ 3, 5 ರಿಂದ 7 ರವರ ಪರಿಚಯ ಇರುತ್ತದೆ. ದಿ: 20-09-2019 ರಂದು ಬೆಳಗ್ಗೆ 11-30 ಗಂಟೆ ಸಮಯದಲ್ಲಿ ನಾನು ಚಾಸಾ-1 ರವರ ಕೊಠಡಿ ಸಂಖ್ಯೆ 2 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಒಬ್ಬ ಆಸಾಮಿ ಏಕಾಏಕಿ ಚಾಸಾ-1 ರವರ ಕೊಠಡಿಗೆ ಒಳಗೆ ಬಾಗಿಲಿನ ಬಳಿ ಬಂದು ಏರು ಧ್ವನಿಯಲ್ಲಿ ಮಾತನಾಡಿ ಕೂಗಾಡುತ್ತಾ ನಾನು ಹೇಳಿದ ಕೆಲಸ ಆಗಬೇಕು ಎಂದು ಹೇಳಿದನು. ಆಗ ಚಾಸಾ-1 ರವರು ಯಾವ ವಿಷಯಕ್ಕೆ ಬಂದಿದ್ದೆ ಏನು ಕೆಲಸ ಆಗಬೇಕು ಎಂದು ಕೇಳಿದರು. ಕಾರಣ ನೀಡದೇ ಚಾಸಾ-1 ರವರ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ. ಆಗ ನಾನು ಚಾಸಾ-2, 3 ಮತ್ತು 5 ರವರು ಹೋಗಿ ಜಗಳ ಬಿಡಿಸಿ ಸಮಾಧನಾ ಪಡಿಸಿರುತ್ತೇವೆ. ಸದರಿ ಪ್ರಕರಣಕ್ಕೆ ಹೋಗಿ ಜಗಳ ಬಿಡಿಸಿ ಸಮಾಧಾನ ಪಡಿಸಿರುತ್ತೇವೆ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆ ದಿನ ಗಲಾಟೆ ಮಾಡಿದ ವ್ಯಕ್ತಿಯನ್ನು ನೋಡಿ ಗುರುತಿಸಬಲ್ಲೆ, ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾದ ಕಾರಣ ಅವರ ವಕೀಲರಿಂದ ಆರೋಪಿ ಗುರುತಿಸುವುದಕ್ಕೆ ಯಾವುದೇ ತಕರಾರು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು: ಶ್ರೀ ಬಿ ವೈ ವಕೀಲರಿಂದ .**

ಪೋಲೀಸರು ಏನು ಹೇವಿಕೆಯನ್ನು ಬರೆದುಕೊಂಡಿದ್ದಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಕಛೇರಿಯಲ್ಲಿ ಸಿಸಿ ಟಿವಿಯ ಸೌಲಭ್ಯ ಇದೆ ಎಂದರೆ ಸರಿ . ಯಾವುದೇ ಘಟನೆಗಳು ನಡೆದರೆ ಸಿ ಸಿ ಟಿ ವಿ ಯಲ್ಲಿ ರೆಕಾರ್ಡ್ ಆಗುತ್ತದೆ ಎಂದರೆ ಸರಿ. ನಾನು ನಮ್ಮ ಕಛೇರಿಯ ಹೊರಗಡೆ ನಿಂತುಕೊಂಡಿದ್ದೆ ಎಂದರೆ ಸರಿ . ತಹಸೀಲ್ದಾರ್ ರವರ ಕಛೇರಿಯಲ್ಲಿ ಎನು ಮಾತುಕತೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಘಟನೆ ಅದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆಸಾಮಿಯೊಬ್ಬರು ಏರು ಧ್ವನಿಯಲ್ಲಿ ಮಾತನಾಡಲಿಲ್ಲ ಎಂದರೆ ಸರಿಯಲ್ಲ. ಚಾಸಾ–2 ಮತ್ತು 3 ರವರು ಅಸಾಮಿಯನ್ನು ಸಮಾಧಾನ ಮಾಡಿ ಕಳುಹಿಸಿದರು ಎಂದರೆ ಸರಿ. ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿಸಲಿಲ್ಲ ಎಂದರೆ ಸರಿಯಲ್ಲ. ನೀವು ಹೇಳು ರೀತಿಯಲ್ಲಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಜೊತೆಗೆ ಸೇರಿದ ನಿವು ಸುಳ್ಳು ಸಾಕ್ಷಿಯನ್ನು ನುಡಿಯುತ್ತೀದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**2 ನೇ ಕಿ**.ಪ್ರ.ದ. ನ್ಯಾ. ದಂ. ನಂಜನಗೂಡು